# ಅಮರನಾಥ ಯಾತ್ರೆ

◆ ಎನ್.ಕೆ. ಸತ್ಯನಾರಾಯಣ

ಸಾಮಾನ್ಯವಾಗಿ ಅಮರನಾಥ ಯಾತ್ರೆಯು ದೆಹಲಿಯಿಂದ ಪ್ರಾರಂಭವಾಗುತ್ತದೆ. ಯಾತ್ರಿಕರು ದೆಹಲಿಯಿಂದ ಅಮರನಾಥಕ್ಕೆ ಹೋಗಬೇಕಾದರೆ, ಮೊದಲು ದೆಹಲಿಯಿಂದ ಜಮ್ಮುವಿಗೆ ಹೋಗಬೇಕು. ಇದು ಸುಮಾರು ೫೮೬ ಕಿ.ಮೀ. ಪ್ರಯಾಣ. ಜಮ್ಮುವಿನಲ್ಲಿ ಸೈನ್ಯದವರು, ಯಾತ್ರಿಕರನ್ನು ಮತ್ತು ಯಾತ್ರಿಕರ ಸಾಮಾನುಗಳನ್ನು ಬಹಳ ದೀರ್ಘವಾದ ಮತ್ತು ಸೂಕ್ಷ್ಮವಾದ ಯಂತ್ರಗಳ ಪರೀಕ್ಷೆಗಳಿಗೆ ಒಳಪಡಿಸಿ, ಯಾತ್ರಿಕರಲ್ಲಿ ಯಾವುದೇ ವಿಧವಾದ ಅಪಾಯಕರ ಮತ್ತು ಹಾನಿಕರವಾದ ವಸ್ತುವಿಲ್ಲವೆಂದು ಖಚಿತಪಡಿಸಿಕೊಂಡ ನಂತರ ಬಸ್ಸನ್ನು ಮುಂದೆ ಹೋಗಲು ಬಿಡುತ್ತಾರೆ.

ಜಮ್ಮುವಿನಿಂದ ಸುಮಾರು ೩೦೦ ಕಿ.ಮೀ. ದೂರವಿರುವ ಪೆಹಲ್‌ಗಾಂವ್ ಎಂಬ ಪಟ್ಟಣಕ್ಕೆ ಪ್ರಯಾಣ ಮಾಡಬೇಕು. ಈ ಪ್ರಯಾಣ ಬಹಳ ಆಯಾಸವುಂಟುಮಾಡುತ್ತದೆ. ಕಾರಣ, ಹೆಚ್ಚಿನ ತಿರುವುಗಳು ಇರುತ್ತವೆ. ಇಲ್ಲಿ ಬಹಳ ಮುಖ್ಯವಾದ ಮತ್ತು ನೆನಪಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ, ಜಮ್ಮುವಿನಿಂದ ಪ್ರಯಾಣ ಶುರುವಾದ ನಂತರ ಪ್ರತಿ ೨೦೦ ಅಡಿ ದೂರಕ್ಕೂ, ಮಿಲಿಟರಿ ಪಡೆಯವರು ತಮ್ಮ ಸುಸಜ್ಜಿತವಾದ ಆಟೋಮ್ಯಾಟಿಕ್ ರೈಫಲ್ ಸಹಿತ, ಭಯೋತ್ಪಾದಕರ ಹಾವಳಿಯಿಂದ ಯಾತ್ರಿಕರನ್ನು ರಕ್ಷಿಸಲು ನಿಯೋಜಿತರಾಗಿರುತ್ತಾರೆ. ಯಾತ್ರಿಕರ ಹಿತರಕ್ಷಣೆಗಾಗಿ, ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಪ್ರತಿಯೊಬ್ಬ ಅಮರನಾಥ ಯಾತ್ರಿಗೆ ಗುರುತಿನ ಚೀಟಿಯನ್ನು ಕೊಟ್ಟು, ಜೀವಕ್ಕೆ ಹಾನಿಯಾದರೆ ಅವರ ಜೀವನಷ್ಟ ಪರಿಹಾರಕ್ಕಾಗಿ ವಿಮೆ ಮಾಡುತ್ತಾರೆ.

ಜಮ್ಮುವಿನಿಂದ ಪೆಹಲ್‌ಗಾಂವ್ ಸೇರಿದ ನಂತರ, ಒಂದು ರಾತ್ರಿ ತಂಗಬೇಕು. ಕಾರಣ ಸಾಯಂಕಾಲದ ನಂತರ ಮಿಲಿಟರಿಯವರು ಪ್ರಯಾಣಕ್ಕೆ ಅನುಮತಿ ಕೊಡುವುದಿಲ್ಲ. ಈ ಪೆಹಲ್‌ಗಾಂವ್ ಎಂಬ ಸ್ಥಳವು ಬಹಳ ಸುಂದರವಾದ ಪಟ್ಟಣ ಮತ್ತು ಪ್ರಕೃತಿ ಸೌಂದರ್ಯವನ್ನು ಸೂರೆಗೊಂಡಿರುವ ನದಿ ಮತ್ತು ಬೆಟ್ಟ, ಗುಡ್ಡ, ಗಿಡಗಳ ಪ್ರದೇಶವಾಗಿದೆ. ಇಲ್ಲಿನ ದಿವ್ಯ ಪ್ರಕೃತಿ ಸೌಂದರ್ಯದ ಸೊಬಗನ್ನು ಸವಿಯಲು ಅನೇಕರು ಬಹಳ ದೂರದಿಂದ ಬಂದು ನೆಲೆಸಿ, ಆನಂದಪಡುತ್ತಾರೆ.

ಪೆಹಲ್‌ಗಾಂವ್‌ನಿಂದ ಶ್ರೀನಗರಕ್ಕೆ ಸುಮಾರು ೯೦ ಕಿ.ಮೀ. ದೂರ. ಆದರೆ ಯಾತ್ರಿಕರು ಇಲ್ಲೇ ರಾತ್ರಿ ತಂಗಬೇಕು ಮತ್ತು ಮಾರನೆಯ ದಿನ ಬೆಳಗ್ಗೆ ಇಲ್ಲಿಂದ ೧೬ ಕಿ.ಮೀ. ದೂರವಿರುವ ಚಂದನವಾರಿ ಎಂಬ ಸ್ಥಳಕ್ಕೆ ಕಾಡಿನ ಮಾರ್ಗವಾದ ರಸ್ತೆಯಲ್ಲಿ ಪ್ರಯಾಣಿಸಬೇಕು. ಈ ಚಂದನವಾರಿಯಿಂದ ಅಮರನಾಥ ಗುಹೆಗೆ ಸುಮಾರು ೩೦ ಕಿ.ಮೀ. ದೂರದ ಪ್ರಯಾಣ ಪ್ರಾರಂಭವಾಗುತ್ತದೆ.

ಚಂದನವಾರಿಯಿಂದ ಅಮರನಾಥಕ್ಕೆ ಯಾತ್ರಿಕರು ಕಾಲ್ನಡಿಗೆಯಲ್ಲಿ ಹೋಗಬಹುದು. ಹಣವುಳ್ಳ ಹಾಗೂ ನಡೆಯಲಾರದ ಯಾತ್ರಿಕರು ಕುದುರೆಯ ಮೇಲೂ ಹೋಗಬಹುದು. ಇನ್ನೂ ಅನುಕೂಲವಾಗಿರುವವರು ಮತ್ತು ಆಯಾಸವಿಲ್ಲದೆ ಹೋಗಬಯಸುವವರು ಡೋಲಿ (ತೊಟ್ಟಿಲು) ಮೂಲಕವೂ ಹೋಗಬಹುದು. **ಬೆಟ್ಟ, ಗುಡ್ಡ, ಕಲ್ಲು, ಮುಳ್ಳು, ಮತ್ತು ಮಂಜಿನ ಇಕ್ಕಟ್ಟಾದ ಮತ್ತು ಕಡಿದಾದ ಕಠಿಣ ಪ್ರಯಾಣವನ್ನು ಕೆಳಗಿನ ಚಿತ್ರ ಮನಮುಟ್ಟುವಂತೆ ನಿರೂಪಿಸುತ್ತದೆ.**




ಒಂದೇ ದಿನದಲ್ಲಿ ಯಾತ್ರಿಕರು ಅಮರನಾಥ ಗುಹೆಯನ್ನು ಸೇರಲು ಸಾಧ್ಯವಿಲ್ಲ. ಕಾರಣ ಇದು ಬಹಳ ಕಠಿಣವಾದ ಮತ್ತು ಸಮಯ ತೆಗೆದುಕೊಳ್ಳುವ ಪ್ರಯಾಣ. ಆದ್ದರಿಂದ ಯಾತ್ರಿಕರು ಮಧ್ಯದಲ್ಲಿ ತಮ್ಮ ವಿಶ್ರಾಂತಿಗೋಸ್ಕರ ಶೇಷ್‌ನಾಗ್ ಎಂಬ ಸ್ಥಳದಲ್ಲಿ ಅಥವಾ ಪಂಚತರಣಿ (ಐದು ನದಿಗಳ ಸಂಗಮ) ಎಂಬ ಸ್ಥಳದಲ್ಲಿ ತಂಗಬಹುದು. ಈ ಎರಡೂ ಸ್ಥಳಗಳಲ್ಲಿ ಡೇರಾ (ಟೆಂಟ್) ವ್ಯವಸ್ಥೆಯಿದೆ. ರಾತ್ರಿ ವಿಶ್ರಾಂತಿಗೋಸ್ಕರ ಹೊದಿಕೆ

ಇತ್ತೀಚಿನ ವರ್ಷಗಳಲ್ಲಿ ಆತಂಕವಾದಿಗಳ ಚಟುವಟಿಕೆಗಳ ಮಧ್ಯೆ ಬಹಳ ಕಠೋರ, ಸಾಹಸಮಯ ಮತ್ತು ಪ್ರಯಾಸಕರವಾದ ಅಮರನಾಥ ಯಾತ್ರೆಯ ಪರಿಚಯವನ್ನು ಮಾಡಿಕೊಟ್ಟಿರುವವರು ಮೈಸೂರಿನ ನಿವೃತ್ತ ಇಂಜಿನಿಯರ್ ಆದ ಶ್ರೀ ಎನ್.ಕೆ. ಸತ್ಯನಾರಾಯಣ.

ಸಮೇತ ಹಾಸಿಗೆ ದೊರೆಯುವುದರಿಂದ ಯಾತ್ರಿಕರು ಅವರವರ ಅನುಕೂಲಕ್ಕೆ ಅನುಸಾರವಾಗಿ ತಂಗಬಹುದು. ಇಲ್ಲಿ ವಿಪರೀತ ಚಳಿಯಾದ ಹವಾಮಾನವುಂಟು. ಇದು ಸಮುದ್ರಮಟ್ಟಕ್ಕಿಂತ ಸುಮಾರು ೧೪,೫೦೦ದಿಂದ ೧೫,೦೦೦ ಅಡಿ ಎತ್ತರದಲ್ಲಿರುತ್ತದೆ. ಆದ್ದರಿಂದ ಇಲ್ಲಿ ಕೆಲವರಿಗೆ ಉಸಿರಾಡಲು ಸಾಕಷ್ಟು ಆಮ್ಲಜನಕದ ಕೊರತೆಯುಂಟಾಗಬಹುದು. ಆದುದರಿಂದಲೇ ಇಲ್ಲಿ ಮಿಲಿಟರಿಯವರು ಔಷಧೋಪಚಾರ  ಮತ್ತು ಯಾತ್ರಿಕರಿಗೆ ಆಮ್ಲಜನಕದ ಕೊರತೆಗೆ ಚಿಕಿತ್ಸೆಯ ಏರ್ಪಾಡು ಮಾಡಿರುತ್ತಾರೆ.


ಚಂದನವಾರಿಯಿಂದ ಶೇಷನಾಗ್‌ಗೆ ಸುಮಾರು ೧೫ ಕಿ.ಮೀ. ದೂರವಿದೆ. ಇಲ್ಲಿ ಪ್ರಕೃತಿ ಸೌಂದರ್ಯ ಅಪೂರ್ವವಾಗಿದೆ.



*ಮಂಜಿನಗಡ್ಡೆಯ ಕೆಳಗಡೆ ನೀರು ಹರಿಯುತ್ತಿರುವ ದೃಶ್ಯ*

ಪಂಚತರಣಿಯಿಂದ ಅಮರನಾಥ ಗುಹೆಗೆ ಸುಮಾರು ೬.೫ ಕಿ.ಮೀ. ದೂರ. ಆದರೆ ವಿವರಿಸಲಾಗದ ಬಹಳ ಸುಂದರವಾದ ಒಂದೇ ಮಾರ್ಗದಲ್ಲಿ ಯಾತ್ರಿಕರು ಪ್ರಯಾಣ ಮಾಡಬೇಕು. ಇವರ ಪ್ರಯಾಣವನ್ನು ಮಿಲಿಟರಿ ಪಡೆಯವರು ಬಹಳ ಬಿಗಿ ಭದ್ರತೆಯಿಂದ ಮತ್ತು ಸುವ್ಯವಸ್ಥೆಯಿಂದ ಒಬ್ಬರಾದ ನಂತರ ಮತ್ತೊಬ್ಬರು ಹೋಗುವುದಕ್ಕಾಗಲೀ ಅಥವಾ ಬರುವುದಕ್ಕಾಗಲೀ ಅನುಮತಿಯನ್ನು ಕೊಟ್ಟು ಮುಂದುವರಿಯಲು ಅವಕಾಶ ಕಲ್ಪಿಸಿ ಕೊಡುತ್ತಾರೆ. ಇಲ್ಲಿಯೂ ಕೂಡ ಪ್ರತಿಯೊಂದು ೧೦೦ ಅಡಿ ದೂರಕ್ಕೂ ಮಿಲಿಟರಿ ಪಡೆಯವರು ಅತ್ಯಂತ ವಿಶೇಷವಾದ ಬಂದೂಕ ಸಮೇತರಾಗಿ ಕಾಯುತ್ತಿರುತ್ತಾರೆ. ಇಷ್ಟೇ ಅಲ್ಲದೆ ಯಾತ್ರಿಕರ ಸುರಕ್ಷತೆ ಮತ್ತು ಸಂರಕ್ಷಣೆಗೋಸ್ಕರ, ಮಿಲಿಟರಿ ಪಡೆಯವರು ಎರಡು ಹೆಲಿಕಾಪ್ಟರ್‌ಗಳಲ್ಲಿ ಆತಂಕವಾದಿಗಳನ್ನು ತಡೆಗಟ್ಟಲು ಗಗನ ಪಹರೆಯನ್ನು ನಡೆಸುತ್ತಾರೆ. ಇಂತಹ ದೇಶಭಕ್ತರನ್ನು ಮತ್ತು ಯಾತ್ರಿಕರ ರಕ್ಷಕರನ್ನು ನಾವು ಕೃತಜ್ಞತೆಯಿಂದ ಸ್ಮರಿಸಬೇಕು. ಅಮರನಾಥ ಗುಹೆಯು ಸುಮಾರು ೩ ಕಿ.ಮೀ. ದೂರವಿರುವಾಗಲೇ ಯಾತ್ರಿಕರು ಕಾಲ್ನಡಿಗೆಯಲ್ಲಿ ಮಂಜುಗಡ್ಡೆಯ ಮೇಲೆ  ಪ್ರಯಾಣ ಮಾಡಬೇಕು. ಇದು ಬಹಳ ಕಷ್ಟವಾದ ಮತ್ತು ಪ್ರಯಾಸವಾದ ಪ್ರಯಾಣ.

ಅಮರನಾಥ ಗುಹೆಯನ್ನು ಪ್ರವೇಶಿಸಬೇಕಾದರೆ ಸುಮಾರು ೩೦೦ ಕಡಿದಾದ ಮೆಟ್ಟಿಲುಗಳನ್ನು ಹತ್ತಬೇಕು. ಅಮರನಾಥ ಗುಹೆಯು ಸುಮಾರು ೧೫೦ ಅಡಿ ಉದ್ದ ೬೫ ಅಡಿ ಎತ್ತರವಿದ್ದು ಒಳ ಆಳತೆ ೫೦ ಅಡಿಗಳಿದೆ. ಈ ಗುಹೆಯ ವಿಶೇಷವೇನೆಂದರೆ,



*ಯಾತ್ರಿಕರಿಗೆ ಮಿಲಿಟರಿಯವರು ಸಹಾಯ ಮಾಡಿ ಅವರನ್ನು ಅಮರನಾಥ್ ಗುಹೆಗೆ ಸುರಕ್ಷಿತವಾಗಿ ಕೊಂಡೊಯ್ಯುವ ದೃಶ್ಯ.*

ಗುಹೆಯ ಯಾವ ಭಾಗದಲ್ಲೂ ಒಂದು ಕೂದಲಿನಷ್ಟೂ ಬಿರುಕು ಬಿಟ್ಟಿಲ್ಲ.  ಹಿಮಲಿಂಗವು  ಇಲ್ಲಿ ಹೇಗೆ ಸೃಷ್ಟಿಯಾಗುತ್ತದೆ ಎಂಬುದನ್ನು ಇಲ್ಲಿಯವರೆಗೆ ಯಾರೂ ಶೋಧಿಸಿಲ್ಲ. ಈ ಹಿಮದ ಲಿಂಗವು ನಾವು ಕಂಡಾಗ ಸುಮಾರು ೧೧ ಅಡಿ ಎತ್ತರವಿದ್ದು ೪ ಅಡಿ ವ್ಯಾಸವಿತ್ತು. ಇದರ ದರ್ಶನವು ಜೂನ್ ಕೊನೆಯ ವಾರದಿಂದ ಆಗಸ್ಟ್ ಎರಡನೇ ವಾರದ ತನಕ ಲಭ್ಯವಿರುತ್ತದೆ. ಈ ಹಿಮದ ಲಿಂಗವು ದಿನಕಳೆದಂತೆ ಸ್ವಲ್ಪಸ್ವಲ್ಪವಾಗಿ ಕರಗಿ ಹೋಗುತ್ತದೆ.



*ಹಿಮಲಿಂಗವು ಅಮರನಾಥ ಗುಹೆಯೊಳಗೆ ಅಂದವಾದ ರೂಪದಲ್ಲಿ ಸೃಷ್ಟಿಯಾಗಿರುವ ದೃಶ್ಯ*

ಆದರೆ ಇಲ್ಲಿಯ ಬಹಳ ವಿಚಿತ್ರವಾದ, ವಿಶಿಷ್ಟವಾದ ಮತ್ತು ಆಶ್ಚರ್ಯವಾದ ವಿಷಯವೇನೆಂದರೆ ದೈವ ಮತ್ತು ಪ್ರಕೃತಿಯ ಮಿಲನಗಳಂತೆ, ಎರಡು ಜೀವವುಳ್ಳ ಪಕ್ಷಿಗಳು (ಪಾರಿವಾಳಗಳು) ಇಂತಹ ಕಠಿಣವಾದ ಮತ್ತು ಏನೂ ಆಹಾರ ದೊರಕದ ವಾತಾವರಣದಲ್ಲಿ ವಾಸವಾಗಿರುವುದು. ಇಂಥದೊಂದು ಅವಕಾಶ ಕಲ್ಪಿಸಿರುವ  ದೈವಮಹಿಮೆಯನ್ನಾಗಲೀ ಅಥವಾ ಪ್ರಕೃತಿಯ ರಹಸ್ಯವನ್ನೇ ಆಗಲೀ ತಿಳಿಯಲು ಇದುವರೆವಿಗೂ ಯಾರಿಗೂ ಸಾಧ್ಯವಾಗಿಲ್ಲ.